**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 336/2024
ಪಿಡಬ್ಲು :12 ಸಿಡಬ್ಲು :13

ಸಾಕ್ಷಿಯ ಹೆಸರು : ಶ್ರೀ.ಯಲ್ಲಪ್ಪ ಬೆರೆಗುಡ್ಡ @ ಭಜಂತ್ರಿ
ತಂದೆಯ ಹೆಸರು : ಶ್ರೀ. ಮಹಾದೇವಪ್ಪ ಭಜಂತ್ರಿ
ವಯಸ್ಸು : 44 ವರ್ಷ
ಉದ್ಯೋಗ : ವ್ಯಾಪಾರ
ವಾಸ್ತವ್ಯ : ಮುನವಳ್ಳಿ , ಬೆಳಗಾವಿ
ದಿನಾಂಕ : 23-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(1ನೇ ಆರೋಪಿ ಮತ್ತು 5ನೇ ಆರೋಪಿತರು ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಪರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿತರಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ಆರೋಪಿತರ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 9 ಯಲ್ಲಪ್ಪ ಭಜಂತ್ರಿ ಮತ್ತು ಅವರ ಹೆಂಡತಿ ನೊಂದ ಮಹಿಳೆ ನನಗೆ ಗೊತ್ತಿರುತ್ತಾರೆ. ಚಾಸಾಃ 14 ರಿಂದ ಚಾಸಾಃ 16 ನನಗೆ ಗೊತ್ತಿರುತ್ತಾರೆ. 1 ನೇ ಆರೋಪಿ ರಫೀಕ್ ಬೇಪಾರಿ ನನಗೆ ಗೊತ್ತಿರುತ್ತಾರೆ. ವಿಡಿಯೋ ಕಾನ್ಪರೆನ್ಸಿಂಗ ಮುಖಾಂತರ ವಿಚಾರಣೆಗೆ ಹಾಜರಾಗಿರುವ 1ನೇ ಆರೋಪಿಯನ್ನು ಸಾಕ್ಷಿ ಗುರುತಿಸಿದ್ದಾರೆ.

2. ಚಾಸಾಃ 1 ನೊಂದ ಮಹಿಳೆ ಮತ್ತು ಆಕೆಯ ಗಂಡ ಚಾಸಾಃ 9 ರವರ ನಡುವೆ ಜಗಳ ಇದ್ದ ಬಗ್ಗೆ ನನಗೆ ಗೊತ್ತಿರುತ್ತದೆ. ಚಾಸಾಃ 9 ರವರು ಅವರ ಮತ್ತು ಅವರ ಹೆಂಡತಿಯ ನಡುವಿನ ಜಗಳವನ್ನು ಬಗೆಹರಿಸಲು ನಮ್ಮನ್ನು ಕರೆಸಿದ್ದರು. ನಾನು, ಚಾಸಾಃ 14, ಚಾಸಾಃ 15 ಮತ್ತು ಚಾಸಾಃ 16 ರವರು ಚಾಸಾಃ 1 ನೊಂದ ಮಹಿಳೆಯು ವಾಸ ಇದ್ದ ಅವರ ತವರುಮನೆಗೆ ಪಂಚಾಯತಿ ಮಾಡಲು ಹೋಗಿದ್ದೇವು. ನಾವು ಆ ರೀತಿ ಹೋಗಿದ್ದಾಗ ನೊಂದ ಮಹಿಳೆಯನ್ನು ವಿಚಾರಿಸಿದ್ದು, ಆಗ 1ನೇ ಆರೋಪಿ ಆಕೆಯನ್ನು ಚುಡಾಯಿಸುತ್ತಿದ್ದನು , ಆಕೆಯ ಪೋನ ನಂಬರ ಕೇಳುತ್ತಿದ್ದನು ಎಂದು, ಆ ವಿಚಾರ ಆಕೆಯ ಗಂಡನಿಗೆ ಗೊತ್ತಾಗಿ ಆಕೆಯ ಮೇಲೆ ಸಂಶಯಪಡುತ್ತಿದ್ದನು ಎಂದು, ಆ ಕಾರಣ ಆಕೆ ಮನಸ್ಸಿಗೆ ಬೇಸರ ಮಾಡಿಕೊಂಡು ತವರುಮನೆಗೆ ಹೋಗಿದ್ದಳು ಎಂದು ಹೇಳಿದಳು.

3. ನಾವು ಚಾಸಾಃ 1 ರವರಿಗೂ ಮತ್ತು ಆಕೆಯ ಗಂಡ ಚಾಸಾಃ 9 ರವರಿಗೂ ಇಬ್ಬರಿಗೂ ಬುದ್ಧಿ ಹೇಳಿ ಚಾಸಾಃ 1 ರವರನ್ನು ಅವರ ತವರುಮನೆಯಿಂದ ಚಾಸಾಃ 9 ರವರ ಮನೆಗೆ ಕರೆದುಕೊಂಡು ಬಂದು ಬಿಟ್ಟೇವು. 8 ದಿನಗಳ ನಂತರ ಚಾಸಾಃ 9 ನಮ್ಮ ಮನೆಗೆ ಬಂದು 1ನೇ ಆರೋಪಿ, ಚಾಸಾಃ 1 ನೊಂದ ಮಹಿಳೆಯನ್ನು ಕರೆದುಕೊಂಡು ಹೋಗಿದ್ದಾನೆ ಎಂದು ತಿಳಿಸಿದನು. ಅದಕ್ಕೆ ನಾನು, ನೀವು ದೂರು ನೀಡುವುದಿದ್ದರೆ ಮುಂದುವರೆಯಿರಿ ಎಂದು ಹೇಳಿ ಕಳುಹಿಸಿಕೊಟ್ಟೇನು.

4. ಈ ಪ್ರಕರಣದಲ್ಲಿ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ**

ಆರೋಪಿ ಪರ ವಕೀಲರು ಗೈರು ಹಾಜರಾಗಿರುತ್ತಾರೆ. 1ನೇ ಆರೋಪಿಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.

## ಪಾಟೀ ಸವಾಲುಃ 1ನೇ ಆರೋಪಿಯಿಂದ

1ನೇ ಆರೋಪಿ ಮತ್ತು 5ನೇ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ಪ್ರಶ್ನೆ ಕೇಳಲು ಅವಕಾಶ ನೀಡಲಾಯಿತು. ಅವರು ಕೇಳಿದ ಪ್ರಶ್ನೆಗಳನ್ನು ವಾರ್ಡನ ಶ್ರೀದೇವಿ ದಳವಾಯಿ ರವರ ಉಪಸ್ಥಿತಿಯಲ್ಲಿ ತೆಗೆದುಕೊಳ್ಳಲಾಯಿತು.

ಪ್ರಶ್ನೆಃ ನೀವು ಚಾಸಾಃ 9 ಯಲ್ಲಪ್ಪ ಭಜಂತ್ರಿ ಅವರ ಸೋದರ ಮಾವ?
ಉತ್ತರಃ ಹೌದು.

ಪ್ರಶ್ನೆಃ ನೀವು ನನ್ನ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದೀರಿ ?
ಉತ್ತರಃ ಇಲ್ಲ.

ಪ್ರಶ್ನೆಃ 4–5 ಜನರ ಮೇಲೆ ಈ ರೀತಿ ಆರೋಪ ಮಾಡಿ 7–8 ಲಕ್ಷ ರೂಪಾಯಿ ಹಣವನ್ನು ಜನರಿಂದ ಪಡೆದುಕೊಂಡಿರುತ್ತೀರಿ ?
ಉತ್ತರಃ ಸುಳ್ಳು, ನಾನು ಅಂತಹ ಕೆಲಸ ಮಾಡಿಲ್ಲ.

ಪ್ರಶ್ನೆಃ ನಾನು ನೊಂದ ಮಹಿಳೆಯನ್ನು ಕರೆದುಕೊಂಡು ಹೋಗಿದ್ದೇನು ಎಂದು ನೀವು ಆರೋಪಿ ಮಾಡುತ್ತಿದ್ದೀರಿ, ನಾನು ಕರೆದುಕೊಂಡು ಹೋಗಿಲ್ಲ ?
ಉತ್ತರಃ ನೀವು ನೊಂದ ಮಹಿಳೆಯನ್ನು ಕರೆದುಕೊಂಡು ಹೋಗಿರುವುದು ಸತ್ಯ ಇರುತ್ತದೆ.

## ಪಾಟೀ ಸವಾಲುಃ 5ನೇ ಆರೋಪಿಯಿಂದ

ಪ್ರಶ್ನೆಃ ನೀವು ನನ್ನ ಕಡೆಯಿಂದ ಈ ಕೇಸಿನ ಆಗುವ ಮೊದಲು 7 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ಕೊಡದಿದ್ದರೇ ನಿನ್ನ ಮೇಲೆ ಕೇಸು ಹಾಕುತ್ತೇನೆ ಎಂದು ಹೇಳಿ ನನ್ನಿಂದ 7 ಲಕ್ಷ ರೂಪಾಯಿಗಳನ್ನು ಪಡೆದುಕೊಂಡಿರುತ್ತೀರಿ ಅಲ್ಲದೇ ನನ್ನ ಮೇಲೆ ಕೇಸ ಹಾಕಿದ್ದೀರಿ ?
ಉತ್ತರಃ ಇಲ್ಲ, ಸುಳ್ಳು.

ಪ್ರಶ್ನೆಃ ಇದೇ ರೀತಿ ನೀವು ಬೇರೆಯವರಿಗೂ ಸಹ ಮಾಡಿರುತ್ತೀರಿ ?

ಉತ್ತರಃ ಇಲ್ಲ, ಸುಳ್ಳು.

**<u>ಪಾಟೀ ಸವಾಲುಃ 4 ಮತ್ತು 6 ನೇ ಆರೋಪಿತರಿಂದ</u>**

4 ಮತ್ತು 6 ನೇ ಆರೋಪಿತರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.